ಕಂದಾಯ ಹೋಬಳಿಗಳ ಹೆಚ್ಚಳ

4305(4996) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕುಂದಾಪುರ ತಾಲ್ಲೂಕಿನಲ್ಲಿ 3 ಕಂದಾಯ ಹೋಬಳಿಗಳಿದ್ದು, ಸದರಿ ಹೋಬಳಿಗಳನ್ನು ಪುನರ್ ವಿಂಗಡಿಸಿ ಗ್ರಾಮಸ್ಥರ ಅನುಕೂಲಕ್ಕಾಗಿ 10 ಕಿ.ಮೀ. ವ್ಯಾಪ್ತಿಗೆ ಒಂದು ಹೋಬಳಿ ಬರುವಂತೆ ಗ್ರಾಮಗಳನ್ನು ವಿಂಗಡಿಸಿ, ಈಗಿರುವ 3 ಹೋಬಳಿಗಳ ಬದಲು 4 ಹೋಬಳಿಗಳನ್ನು ರಚಿಸಿ, ಜನರಿಗೆ ಅನುಕೂಲ ಮಾಡಿಕೊಡಲಾಗುವುದೇ ;

ಆ) ಹಾಗಾದಲ್ಲಿ ಯಾವಾಗ ಗ್ರಾಮಗಳನ್ನು ವಿಂಗಡಿಸಿ, ಹೋಬಳಿ ರಚನೆ ಮಾಡಲಾಗುತ್ತದೆ; ಹೋಬಳಿ ರಚನೆ ಮಾಡುವಾಗ ಶಾಸಕರ ಅಭಿಪ್ರಾಯ ಕೇಳಲಾಗುವುದೇ ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ಕುಂದಾಪುರ ತಾಲ್ಲೂಕಿನಲ್ಲಿ ಕಂದಾಯ ಹೋಬಳಿಗಳನ್ನು ಪುನರ್ ವಿಂಗಡಿಸುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಕುಂದಾಪುರ ತಾಲ್ಲೂಕಿನಲ್ಲಿ ಅಕ್ರಮ ಜಮೀನು ಸಕ್ರಮ

4307(4997) ಶ್ರೀ ಹಾಲಾಡಿ ಶ್ರೀನಿವಾಸಶೆಟ್ಟಿ (ಕುಂದಾಪುರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಕುಂದಾಪುರ ತಾಲ್ಲೂಕಿನಲ್ಲಿ ಅಕ್ರಮ – ಸಕ್ರಮ ಜಮೀನು ಮಂಜೂರಾತಿ ಕೋರಿ ಬಂದ ಅರ್ಜಿಗಳು ಎಷ್ಟು ; ಕುಂದಾಪುರ ಮತ್ತು ಬೈಂದೂರು ವಿಧಾನಸಭಾ ಕ್ಷೇತ್ರಗಳ ನಮೂನೆ 50 ಮತ್ತು 53 ರಲ್ಲಿ ಬಂದ ಅರ್ಜಿಗಳ ವಿವರವನ್ನು ಪ್ರತ್ಯೇಕವಾಗಿ ಒದಗಿಸುವುದು ;

ಆ) ಸದರಿ ಅರ್ಜಿಗಳಲ್ಲಿ ಅಕ್ರಮ – ಜಮೀನು ಸಕ್ರಮ ಮಾಡಿ ಎಷ್ಟು ಜನರಿಗೆ ಮಂಜೂರಾತಿ ನೀಡಲಾಗಿದೆ ; ಕುಂದಾಪುರ ಮತ್ತು ಬೈಂದೂರು ವಿಧಾನಸಭಾ ಕ್ಷೇತ್ರದ ವಿವರಗಳನ್ನು ನಮೂನೆ 50 ಮತ್ತು 53ಕ್ಕೆ ಸಂಬಂಧಪಟ್ಟಂತೆ ಪ್ರತ್ಯೇಕ ಒದಗಿಸುವುದು ;

ಇ) ಇತ್ಯರ್ಥಕ್ಕೆ ಬಾಕಿ ಇರುವ ಕಡತಗಳೆಷ್ಟು ; ಕುಂದಾಪುರ ಮತ್ತು ಬೈಂದೂರು ವಿಧಾನಸಭಾ ಕ್ಷೇತ್ರಗಳ ವಿವರವನ್ನು ಪ್ರತ್ಯೇಕ ಒದಗಿಸುವುದು ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ)

	ನಮೂನೆ – 50	ನಮೂನೆ – 53
1. ಕುಂದಾಪುರ ವಿಧಾನಸಭಾ ಕ್ಷೇತ್ರ	9,773	13,674
2. ಬೈಂದೂರು ವಿಧಾನಸಭಾ ಕ್ಷೇತ್ರ	17,019	18,334
ಒಟ್ಟು	**26,792**	**30,008**

ಆ)

	ನಮೂನೆ – 50	ನಮೂನೆ – 53
1. ಕುಂದಾಪುರ ವಿಧಾನಸಭಾ ಕ್ಷೇತ್ರ	3,362	524

2. ಬೈಂದೂರು		
ವಿಧಾನಸಭಾ ಕ್ಷೇತ್ರ	4,441	1,050
ಒಟ್ಟು	**7,803**	**1,574**
ಸಿ)	ನಮೂನೆ – 50	ನಮೂನೆ – 53
1. ಕುಂದಾಪುರ	159	12,566
2. ಬೈಂದೂರು	147	14,131
ಒಟ್ಟು	**306**	**26,697**

ಅಕ್ರಮ ಜಮೀನು ಸಕ್ರಮೀಕರಣಗೊಳಿಸುವ ಅರ್ಜಿ ಸಲ್ಲಿಸುವ ಅವಧಿ ವಿಸ್ತರಣೆ

4308(4998) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಅಕ್ರಮ – ಜಮೀನು ಸಕ್ರಮೀಕರಣಗೊಳಿಸುವ ಬಗ್ಗೆ ಅರ್ಜಿ ಸಲ್ಲಿಸಲು ಮಾಹಿತಿಯ ಕೊರತೆಯಿಂದ ಬಹಳಷ್ಟು ಗ್ರಾಮಸ್ಥರು ವಂಚಿತರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

ಆ) ಬಂದಿದ್ದಲ್ಲಿ, ಅರ್ಜಿ ಸಲ್ಲಿಸಲು ಮನಃ ಅವಕಾಶ ಒದಗಿಸಲಾಗುವುದೇ :

ಇ) ಅವಕಾಶ ನೀಡುವುದಾದಲ್ಲಿ ಯಾವ ದಿನಾಂಕದಿಂದ ಎಲ್ಲಿಯವರೆಗೆ ಅವಕಾಶ ನೀಡಲಾಗುವುದು ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ಈ ಬಗ್ಗೆ ಸರ್ಕಾರಕ್ಕೆ ಬಂದಿರುವ ಮನವಿ ಪರಿಶೀಲನೆಯಲ್ಲಿದೆ.

ಆ) –– " ––

ಇ) –– " ––

ರಾಜ್ಯದ ಅರಣ್ಯಗಳಲ್ಲಿ ಹಾಳಾಗುತ್ತಿರುವ ಮರಗಳ ಉಪಯೋಗ

4309(4999) ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಅರಣ್ಯಗಳಲ್ಲಿ ಹಳೇ ಮರಗಳು ಬಿದ್ದು, ಉಪಯೋಗಕ್ಕೆ ಬಾರದೆ ರಾಷ್ಟ್ರೀಯ ನಷ್ಟವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಸದರಿ ಮರಗಳು ಕುಸಿದು ಬಿದ್ದು ಹಾಳಾಗುವ ಮೊದಲೇ ಅವುಗಳನ್ನು ಪತ್ತೆ ಮಾಡಿ, ಕಾಲಮಿತಿ ಅವಧಿಯೊಳಗೆ ಸುಧಾರಣೆ ದರದಲ್ಲಿ ಬಡವರು ಮನೆ ಕಟ್ಟುವಾಗ ಕೊಡುವ ಉದ್ದೇಶ ಸರ್ಕಾರಕ್ಕೆ ಇದೆಯೇ : ಈ ವಿಷಯದಲ್ಲಿ ಸರ್ಕಾರದ ನಿಲುವೇನು ;

ಇ) ಸದರಿ ವ್ಯವಸ್ಥೆಯನ್ನು ಕೂಡಲೇ ಜಾರಿಗೆ ತರುವ ಉದ್ದೇಶ ಸರಕಾರಕ್ಕಿದೆಯೇ : ಇದ್ದಲ್ಲಿ, ಯಾವಾಗ ತರಲಾಗುವುದು ?

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ ಸಚಿವರು) :

ಅ) ಇಲ್ಲ.

ಆ) ಇಲ್ಲ

ಸಾರ್ವಜನಿಕರಿಗೆ ಮನೆ ನಿರ್ಮಾಣಕ್ಕಾಗಿ ಕೋರಿಕೆ ಪತ್ರಗಳು ಬಂದಾಗ, ನಿಗದಿತ ಚಿಲ್ಲರೆ ಮಾರಾಟ ದರದಲ್ಲಿ ಸರ್ಕಾರಿ ನಾಟಾ ಸಂಗ್ರಹಾಲಯದಿಂದ ನೀಡಲಾಗುವುದು.

ಇ) ಉದ್ಭವಿಸುವುದಿಲ್ಲ.